2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 102/2018

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಚಂದ್ರಪ್ಪ | ಪಿಡಬ್ಲೂ -13 |
| ತಂದೆಯ ಹೆಸರು | - | ತಿಮ್ಮಪ್ಪ | ಸಿಡಬ್ಲೂ -19 |
| ವಯಸ್ಸು | - | 47 ವರ್ಷ | |
| ಉದ್ಯೋಗ | - | ಅಂಗಡಿ ವ್ಯಾಪಾರ | |
| ವಾಸ ಸ್ಥಳ | - | ದೊಡ್ಡಬುಕ್ಕಸಾಗರ | |

ದಿನಾಂಕಃ 28-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಫ್ರಾಸಾ.6 ಮತ್ತು ಅವರ ಮಕ್ಕಳಾದ ಫ್ರಾಸಾ.7 ಕುಮಾರ್ ಮತ್ತು ಮೃತ ಮಂಜುನಾಥ ರವರು ಗೊತ್ತು, ಅವರು ನಮ್ಮ ಊರಾದ ದೊಡ್ಡಬುಕ್ಕಸಾಗರದವರು. ಫ್ರಾಸಾ.6 ರವರ ಮಗನಾದ ಮಂಜುನಾಥ ಮೃತಪಟ್ಟಿದ್ದಾನೆ. ನಮ್ಮ ಊರಾದ ದೊಡ್ಡಬುಕ್ಕಸಾಗರ ಗ್ರಾಮದಲ್ಲಿ ಒಂದು ಚಿಲ್ಲರೆ ಅಂಗಡಿಯನ್ನು ಇಟ್ಟುಕೊಂಡಿದ್ದೇನೆ.

2. ಪ್ರತೀ ದಿನ ಮೃತ ಮಂಜುನಾಥ ಸದರಿ ಅಂಗಡಿಗೆ ಬಂದು ಹೋಗುತ್ತಿದ್ದನು. ಸಾಮಾನ್ಯವಾಗಿ ಆತ ಬೆಳಿಗ್ಗೆ 7.00 ರಿಂದ 8.00 ಗಂಟೆ ಸಮಯದಲ್ಲಿ ಮತ್ತು ಸಂಜೆ 4.00 ರಿಂದ 5.00 ಗಂಟೆ ಸಮಯಕ್ಕೆ ಬಂದು ಹೋಗುತ್ತಿದ್ದನು. ಈಗ್ಗೆ 4-5 ವರ್ಷಗಳ ಹಿಂದೆ ಸದರಿ ಮಂಜುನಾಥ ಮೃತಪಟ್ಟಿದ್ದಾನೆ. ಮಂಜುನಾಥ ಕೊನೆಯ ಬಾರಿಗೆ ನಮ್ಮ ಅಂಗಡಿಗೆ ಯಾವಾಗ ಬಂದು ಹೋಗಿದ್ದನು ಎಂದು ನನಗೆ ನೆನಪಿಲ್ಲ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು,

ಅವರು ನಮ್ಮ ಊರಿನವರು. ಆರೋಪಿತರೂ ಸಹ ನನ್ನ ಅಂಗಡಿಗೆ ಬಂದು ಹೋಗಿ ಮಾಡುತ್ತಿದ್ದರು ಆದರೆ ಅವರು ನನ್ನ ಅಂಗಡಿಗೆ ಕೊನೆಯ ಬಾರಿಗೆ ಯಾವಾಗ ಬಂದಿದ್ದರು ಎಂದು ನನಗೆ ನೆನಪಿಲ್ಲ. ಮಂಜುನಾಥನ ಸಾವಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಕಡೂರು ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

3. ದಿನಾಂಕ 28.04.2018 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಮೃತ ಮಂಜುನಾಥ ಬೈಕಿನಲ್ಲಿ ನನ್ನ ಅಂಗಡಿಯ ಹತ್ತಿರ ಬಂದು ನನ್ನನ್ನು ಮಾತನಾಡಿಸಿದನು ಎಂದರೆ ನನಗೆ ಗೊತ್ತಿಲ್ಲ. ನಂತರ ಮಂಜುನಾಥ ಬೈಕನ್ನು ಕೊರಟರಹಟ್ಟಿ ಕಡೆಗೆ ತಿರುಗಿಸಿಕೊಂಡು ಸ್ವಲ್ಪ ದೂರಕ್ಕೆ ಹೋಗಿ ಅಲ್ಲಿಯೇ ನಿಂತಿದ್ದ 1 ನೇ ಆರೋಪಿಯೊಂದಿಗೆ ಏನೋ ಮಾತನಾಡಿದನು ಮತ್ತು 1 ನೇ ಆರೋಪಿಯನ್ನು ತನ್ನ ಬೈಕಿನ ಹಿಂದಿನ ಸೀಟಿನಲ್ಲಿ ಕೂರಿಸಿಕೊಂಡು ಹೋದನು ಎಂದರೆ ನನಗೆ ಗೊತ್ತಿಲ್ಲ. ಅದನ್ನು ನೀವು ನೋಡಿದ್ದೀರಿ ಎಂದರೆ ಸರಿಯಲ್ಲ.

4. ಮಾರನೇ ದಿನ ಅಂದರೆ ದಿನಾಂಕ 29.04.2018 ರಂದು ಮಂಜುನಾಥ ಮನೆಗೆ ಬಂದಿಲ್ಲವೆಂದು ಊರಿನವರು ಮತ್ತು ಆತನ ಮನೆಯವರು ಮಾತನಾಡುತ್ತಿದ್ದರು ಎಂದರೆ ಸರಿ. ಆಗ ನೀವು ಆತನ ಮನೆಯವರಿಗೆ ಮತ್ತು ಊರಿನವರಿಗೆ ಹಿಂದಿನ

ದಿನ ಸಂಜೆ 7.00 ಗಂಟೆಗೆ ಮೃತ ಮಂಜುನಾಥ 1 ನೇ ಆರೋಪಿಯನ್ನು ತನ್ನ ಬೈಕಿನಲ್ಲಿ ಕೂರಿಸಿಕೊಂಡು ಹೋಗಿದ್ದಾಗಿ ಮತ್ತು ಅದನ್ನು ನೀವು ನೋಡಿದ್ದಾಗಿ ತಿಳಿಸಿದ್ದೀರಿ ಎಂದರೆ ಸರಿಯಲ್ಲ. ದಿನಾಂಕ 29.04.2018 ರಂದು ಸಂಜೆ 1 ನೇ ಆರೋಪಿ ನಿಮಗೆ ಸಿಕ್ಕಿದ್ದು ಆಗ ನೀವು ಆತನನ್ನು ಕುರಿತು ಹಿಂದಿನ ದಿನ ಮಂಜುನಾಥನೊಂದಿಗೆ ಬೈಕಿನಲ್ಲಿ ಹೋದಿರಲ್ಲಾ ಎಲ್ಲಿಗೆ ಹೋಗಿದ್ದೀರಿ ಎಂದು ಕೇಳಿದ್ದೇನೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಮಂಜುನಾಥನಿಂದ ತನ್ನ ಜಮೀನಿಗೆ ಹೋಗಲು ಸ್ವಲ್ಪ ದೂರ ಡ್ರಾಪ್ ತೆಗೆದುಕೊಂಡಿದ್ದಾಗಿ ಮತ್ತು ಮಂಜುನಾಥ ಆತನನ್ನು ಇಳಿಸಿ ಬೈಕಿನಲ್ಲಿ ಹೋಗಿದ್ದಾಗಿ ತಿಳಿಸಿದ್ದಾನೆ ಎಂದರೆ ಸರಿಯಲ್ಲ.

5. 2 ದಿನ ಕಳೆದರು ಮಂಜುನಾಥ ಕಾಣದಿದ್ದಾಗ ಆತನ ತಂದೆ ಚಿನ್ನಪ್ಪ ಕಡೂರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸ್ವಲ್ಪ ದಿನಗಳ ನಂತರ ಮೃತ ಮಂಜುನಾಥನು 1 ನೇ ಆರೋಪಿಯ ಹೆಂಡತಿಯೊಂದಿಗೆ ಯಾವಾಗಲೂ ಫೋನಿನಲ್ಲಿ ಮಾತನಾಡುತ್ತಾನೆ ಎಂಬ ವಿಚಾರಕ್ಕೆ 1 ನೇ ಆರೋಪಿಯು ದಿನಾಂಕ 28.04.2018 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಮಂಜುನಾಥನನ್ನು ಕರೆದುಕೊಂಡು ಹೋಗಿ ತನ್ನ ಬಾಮೈದುನನಾದ 2 ನೇ ಆರೋಪಿಯೊಂದಿಗೆ ಸೇರಿ ಕೊಲೆ ಮಾಡಿ ಆತನ ಶವವನ್ನು ಜೋಗಿ ಕಣಿವೆ ಅರಣ್ಯ ಪ್ರದೇಶದೊಳಗೆ ಸುಟ್ಟು ಹಾಕಿದ್ದಾಗಿ ನಿಮಗೆ ತಿಳಿಯಿತು ಎಂದರೆ ಸರಿಯಲ್ಲ. ಮೃತ ಮಂಜುನಾಥ್ ಓಡಿಸುತ್ತಿದ್ದ ಬೈಕನ್ನು ನೋಡಿದ್ದೇನೆ. ಅದನ್ನು ನೋಡಿದರೆ

ಗುರುತಿಸುತ್ತೇನೆ, ಆದರೆ ನನಗೆ ಅದರ ನೋಂದಣಿ ಸಂಖ್ಯೆ ನೆನಪಿಲ್ಲ. ನಂತರ ಮಂಜುನಾಥನ ಸಾವಿನ ಬಗ್ಗೆ ಪೊಲೀಸರು 1 ನೇ ಆರೋಪಿಯನ್ನು ಬಂಧಿಸಿರುವ ವಿಚಾರ ನಿಮಗೆ ತಿಳಿಯಿತು ಎಂದರೆ ಸರಿ. ದಿನಾಂಕ 22.06.2018 ರಂದು ಪೊಲೀಸರು ನಿಮ್ಮನ್ನು ಘಟನೆಯ ಬಗ್ಗೆ ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನೀವು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.31 ಎಂದು ಗುರುತಿಸಲಾಯಿತು.

6. ಆರೋಪಿತರು ವಸ್ತುಗಳನ್ನು ಖರೀದಿಸಲು ನಿಮ್ಮ ಅಂಗಡಿಗೆ ಆಗಾಗ್ಗೆ ಬರುತ್ತಿರುತ್ತಾರೆ ಎಂದರೆ ಸರಿ. ಅವರು ನಿಮ್ಮ ಅಂಗಡಿಯ ಖಾಯಂ ಗಿರಾಕಿಗಳು ಎಂದರೆ ಸರಿ. ಮಂಜುನಾಥನ ಸಾವಿನ ಬಗ್ಗೆ ಆರೋಪಿತರ ವಿರುದ್ಧ ದೂರು ದಾಖಲಾಗಿ ಪ್ರಕರಣ ನಡೆಯುತ್ತಿರುವ ಬಗ್ಗೆ ನಿಮಗೆ ತಿಳಿದಿದೆ ಎಂದರೆ ಸರಿ.

7. ದಿನಾಂಕ 28.04.2018 ರಂದು ಸಂಜೆ 7.30 ಗಂಟೆ ಸಮಯದಲ್ಲಿ 1 ನೇ ಆರೋಪಿಯು ಮೃತನೊಂದಿಗೆ ಆತನ ಬೈಕಿನಲ್ಲಿ ಹೋಗುವುದನ್ನು ನೋಡಿದ್ದು ಆ ಬಗ್ಗೆ ನೀವು ಪೊಲೀಸರಿಗೆ ನಿಪಿ.31 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿತರು ನಿಮ್ಮ ಊರಿನವರಾಗಿರುವ ಕಾರಣ ನಿಮ್ಮ ಗಿರಾಕಿಗಳಾಗಿರುವ ಕಾರಣ ಸತ್ಯವನ್ನು ಹೇಳಿದರೆ ಅವರಿಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.